ದಿನಾಂಕ 06.03.2020 ರಂದು ಶ್ರೀ ರೇವಣಪ್ಪ, ನಿರ್ದೇಶಕರು, ಗ್ರಾಮೂಸೌ-2, ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮೀಣ ಇಂಧನ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು ;-

ಹಾಜರಿದ್ದವರು : ಪಟ್ಟಿ ಲಗತ್ತಿಸಿದೆ.

ಶ್ರೀ ಕೃಷ್ಣಪ್ಪ ಲೋಹರ್, ಉಪನಿರ್ದೇಶಕರು, ಗ್ರಾಮೂಸೌ-2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸಭೆಗೆ ಆಗಮಿಸಿದವರನ್ನೆಲ್ಲಾ ಸ್ವಾಗತಿಸಿದರು.

ನಿರ್ದೇಶಕರು, ಗ್ರಾಮೂಸೌ-2 ನವ ರಾಷ್ಟ್ರೀಯ ಜೈವಿಕ ಅನಿಲ ಮತ್ತು ಸಾವಯವ ಗೊಬ್ಬರು ಕಾರ್ಯಕ್ರಮದಡಿ ಫೆಬ್ರವರಿ 2020 ರ ಅಂತ್ಯದವರೆಗೆ ಸಾಧಿಸಿದ ಪ್ರಗತಿ ವರದಿಗಳನ್ನು ಕೆಳಕಂಡಂತೆ ಪರಿಶೀಲಿಸಿದರು.

1. ಬೆಳಗಾವಿ, ಚಿಕ್ಕಮಗಳೂರು, ಕೊಪ್ಪಳ, ಶಿವಮೊಗ್ಗ ಮತ್ತು ಮಂಡ್ಯ ಜಿಲ್ಲೆಗಳನ್ನು ಹೊರತುಪಡಿಸಿ ಇನ್ನುಳಿದ 25 ಜಿಲ್ಲೆಗಳು ಕಾರ್ಯಕ್ರಮದಡಿ **ಮಾರ್ಚ್ 20202ರೊಳಗೆ** ನಿಗದಿ ಪಡಿಸಿದ ಭೌತಿಕ ಗುರಿಯನ್ನು ಪೂರ್ಣ ಪ್ರಮಾಣದಲ್ಲಿ ಸಾಧಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

   ( ಕ್ರಮ : ಎಲ್ಲಾ ಜಿ.ಪಂ.ಗಳ ಮುಖ್ಯ ನಿರ್ವಾಹಕ ಅಧಿಕಾರಿಗಳು)

2. ಬೆಳಗಾಂ, ಚಿಕ್ಕಮಗಳೂರು, ಕೊಪ್ಪಳ ಶಿವಮೊಗ್ಗ ಮತ್ತು ಮಂಡ್ಯ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು ಈ ಕೆಳಕಂಡ ಭೌತಿಕ ಗುರಿಯನ್ನು ಹಿಂಪಡೆಯುವಂತೆ ಸಭೆಗೆ ತಿಳಿಸಲಾಗಿದ್ದರ ಮೇರೆಗೆ ಸಂಬಂಧಿತ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪ್ರಸ್ತಾವನೆ ಸಲ್ಲಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

| ಜಿಲ್ಲೆ | ನಿಗದಿ ಪಡಿಸಿದ ಭೌತಿಕ ಗುರಿ | ಹಿಂಪಡೆಯಬಹುದಾದ ಗುರಿ |
|---|---|---|
| ಬೆಳಗಾವಿ(*) | 1800 | 400 |
| ಕೊಪ್ಪಳ | 70 | 32 |
| ಶಿವಮೊಗ್ಗ | 400 | 270 |
| ಮಂಡ್ಯ | 150 | 30 |
| ಚಿಕ್ಕಮಗಳೂರು | 250 | 50 |
| ದಕ್ಷಿಣ ಕನ್ನಡ (*) | 350 | 50 |

(*)ಪ್ರಸ್ತಾವನೆ ಸಲ್ಲಿಸಲಾಗಿದೆ.

   (ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿಕ್ಕಮಗಳೂರು, ಕೊಪ್ಪಳ, ಶಿವಮೊಗ್ಗ ಮತ್ತು ಮಂಡ್ಯ)

3. ಯೋಜನಾ ಅಭಿಯಂತರರು, ಜಿಲ್ಲಾ ಪಂಚಾಯತ್, ಮೈಸೂರು, ಹಾವೇರಿ ಹಾಸನ, ಮತ್ತು ವಿಜಯಪುರ ರವರು ಕೆಳಕಂಡಂತೆ ಕಾರ್ಯಕ್ರಮದಡಿ ಹೆಚ್ಚಿನ ಭೌತಿಕ ಗುರಿಯನ್ನು ನೀಡುವಂತೆ ಕೋರಿದ್ದರ ಮೇರೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್‌ಗಳಿಂದ ಬೇಡಿಕೆ ಸಲ್ಲಿಸುವಂತೆ ತಿಳಿಸಲಾಯಿತು. ಮೈಸೂರು ಮತ್ತು ಹಾಸನ ಜಿಲ್ಲಾ ಪಂಚಾಯತ್‌ಗಳಿಂದ ಹೆಚ್ಚಿನ

ಗುರಿ ಬೇಡಿಕೆ ಸ್ವೀಕೃತವಾಗಿದ್ದು, ಹಾವೇರಿ ಮತ್ತು ವಿಜಯಪುರ ಜಿಲ್ಲಾ ಪಂಚಾಯತ್‌ಗಳಿಂದ ಗುರಿ ಬೇಡಿಕೆ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಯಿತು

| ಜಿಲ್ಲೆ | ನಿಗದಿ ಪಡಿಸಿದ ಭೌತಿಕ ಗುರಿ | ಗುರಿ ಬೇಡಿಕೆ |
|---|---|---|
| ಮೈಸೂರು | 175 | 250 |
| ಹಾವೇರಿ | 150 | 90 |
| ಹಾಸನ | 650 | 50 |
| ವಿಜಯಪುರ | 220 | 31 |

(ಕ್ರಮ : ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಮತ್ತು ವಿಜಯಪುರ)

4. ಯೋಜನಾ ಅಭಿಯಂತರರು, ಜಿಲ್ಲಾ ಪಂಚಾಯತ್ ಬೆಳಗಾವಿ, ಮೈಸೂರು, ಹಾಸನ, ಮಂಡ್ಯ, ಹಾವೇರಿ, ತುಮಕೂರು, ಬಳ್ಳಾರಿ, ಉತ್ತರ ಕನ್ನಡ ರವರು ಕಾರ್ಯಕ್ರಮದಡಿ ಕೇಂದ್ರ ಸಹಾಯಧನದ ಅಗತ್ಯತೆ ಇದ್ದು, ಸಹಾಯಧನವನ್ನು ಬಿಡುಗಡೆ ಮಾಡುವಂತೆ ಸಭೆಯ ಗಮನಕ್ಕೆ ತಂದರು. ಕೇಂದ್ರ ಸರ್ಕಾರದಿಂದ ಕೇಂದ್ರ ಸಹಾಯಧನವನ್ನು ನಿರೀಕ್ಷಿಸುತ್ತಿದ್ದು, ಅನುದಾನ ಬಿಡುಗಡೆಯಾದ ತರುವಾಯದಲ್ಲಿ ಕೇಂದ್ರ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದೆಂದು ನಿರ್ದೇಶಕರು, ಗ್ರಾಮೂಸೌ–2 ರವರು ತಿಳಿಸಿದರು.

5. <u>2018–19ನೇ ಸಾಲಿನಲ್ಲಿ ಮಹಾಲೇಖಪಾಲರ ಆಡಿಟ್ ತಂಡದವರು ನಡೆಸಿದ ಆಡಿಟ್ ವರದಿಯಲ್ಲಿನ ಆಕ್ಷೇಪಣೆಗಳು ಕೆಳಕಂಡಂತಿದ್ದು, ಈ ಆಕ್ಷೇಪಣೆಗಳ ಕುರಿತು ಕೂಡಲೇ ಕ್ರಮವಹಿಸುವುದು</u>

- ಫಲಾನುಭವಿಗಳ ಪಟ್ಟಿಯನ್ನು website ನಲ್ಲಿ ಅಳವಡಿಸುವುದು
- ಕಾರ್ಯಕ್ರಮದಡಿ ಬಿಡುಗಡೆ ಮಾಡಿದ ಕೇಂದ್ರ ಹಾಗೂ ರಾಜ್ಯ ಸಹಾಯಧನಕ್ಕೆ ಭರಿಸಲಾಗುವ ವೆಚ್ಚವನ್ನು ನಗದು ಪುಸ್ತಕದಲ್ಲಿ ಪ್ರತ್ಯೇಕವಾಗಿ ನಮೂದಿಸುವುದು
- ಕಾರ್ಯಕ್ರಮದ ಬ್ಯಾಂಕ್ ಖಾತೆಗಳಲ್ಲಿ ದೊಡ್ಡ ಮೊತ್ತದ ಅನುದಾನ ಬಳಕೆಯಾಗದಿದ್ದಲ್ಲಿ ಸರ್ಕಾರಕ್ಕೆ ಹಿಂಪಡೆಯುವುದು.
- ಗೋಬರ್ ಗ್ಯಾಸ್ ಘಟಕಗಳ Inlet ಮೇಲೆ ಟರ್ನ ಕೀ ಏಜನ್ಸಿ ಹೆಸರು ವಿಳಾಸ, ವರ್ಷ, ದಿನಾಂಕಗಳ ವಿವರಗಳು visible ಆಗಿ ಮತ್ತು ಶಾಶ್ವತವಾಗಿ ಉಳಿಯುವಂತೆ ಕ್ರಮ ಕೈಗೊಳ್ಳುವುದು.
- ಆಯಾ ಸಾಲಿನಲ್ಲಿ ಬಿಡುಗಡೆಯಾದ ಅನುದಾನವನ್ನು ಅಯಾ ಸಾಲಿಗೆ ವಿನಿಯೋಗಿಸದೇ ಪ್ರತಿ ವರ್ಷ ಮುಂದುವರಿಸಿಕೊಂಡು ಬರುತ್ತಿರುವುದರಿಂದ ಇಲಾಖೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಕ್ಲೇಮುಗಳಿಗೆ ಆಡಿಟ್ ವರದಿಯಲ್ಲಿನ SOE ಗಳಿಗೆ ತಾಳೆಯಾಗದೇ ಕೇಂದ್ರ ಸರ್ಕಾರದ ಆಕ್ಷೇಪಣೆಗೊಳಪಡುತ್ತದೆ.

ಸದರಿ ಆಕ್ಷೇಪಣೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿರುವುದರಿಂದ ಮಾರ್ಚ್ ಅಂತ್ಯದವರೆಗೆ ಸಾಧಿಸಿದ ಭೌತಿಕ ಪ್ರಗತಿಗನುಗುಣವಾಗಿ ಮತ್ತು ಬಿಡುಗಡೆಯಾದ ಅನುದಾನಕ್ಕನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ವೆಚ್ಚ ಭರಿಸಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲು ಕ್ರಮವಹಿಸುವುದು. (ಉದಾ: 2018–19ನೇ ಸಾಲಿನಲ್ಲಿ 2016–17 & 2017–18ನೇ ಸಾಲಿಗೆ ಸಂಬಂಧಿಸಿದಂತೆ ವೆಚ್ಚ ಭರಿಸಿರುವ ಕುರಿತು)

(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

6. ಕಾರ್ಯಕ್ರಮದಡಿ ವೆಚ್ಚವಾಗದೇ ಬಾಕಿ ಉಳಿದ ಅನುದಾನದ ವಿವರವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು ಅನುದಾನವನ್ನು ಹಿಂಪಡೆಯುವಂತೆ ಸಭೆಗೆ ತಿಳಿಸಿದ್ದು, ಹಿಂಪಡೆಯಬಹುದಾದ ಕುರಿತಂತೆ ಕೂಡಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಯಿತು

| ಜಿಲ್ಲೆ | ಹಿಂಪಡೆಯಬಹುದಾದ ರಾಜ್ಯ ಅನುದಾನ (ರೂ.ಲಕ್ಷಗಳಲ್ಲಿ) |
|---|---|
| ಬಳ್ಳಾರಿ | 10.00 |
| ಬೀದರ್ | 8.00 |
| ಬೆಂಗಳೂರು(ನ)* | 10.00 |
| ದಾವಣಗೆರೆ | 8.00 |
| ಕೊಪ್ಪಳ | 2.98 |
| ಗದಗ | 6.00 |

(*) ಅನುಮೋದಿತ ಪ್ರಗತಿ ವರದಿ

(ಕ್ರಮ: ಸಂಬಂಧಿತ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

ನಿರ್ದೇಶಕರು, ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು, ಶಿವಮೊಗ್ಗ ಮತ್ತು ಸೊರಬ ತಾಲ್ಲೂಕುಗಳಲ್ಲಿ ಜೈವಾನಿಲ ಸ್ಥಾವರಗಳ ಪರಿಶೀಲನೆ ನಡೆಸಿರುತ್ತಾರೆ. ಸೊರಬ ತಾಲ್ಲೂಕಿನ ಚಿಕ್ಕಾವಲಿ ಗ್ರಾಮದಲ್ಲಿ ಶ್ರೀ ಬಸಪ್ಪ ಎಂ. ಫಲಾನುಭವಿಗಳ ಮನೆಯಲ್ಲಿ ಕೃಷಿ ಸಾವಯವ ಮಿಷನ್ ಯೋಜನೆಯಡಿ Infosys ಸಹಯೋಗದಲ್ಲಿ ನಿರ್ಮಿಸಲಾಗಿದ್ದ, Flexi Model ನಿರ್ಮಿಸಿದ್ದ ಘಟಕವು ಕೇವಲ ಎರಡು ತಿಂಗಳಲ್ಲಿ Defunct ಆಗಿರುವುದು ಅಲ್ಲದೇ ಗೋಬರ್ ಗ್ಯಾಸ್ ಉತ್ಪಾದನೆ ಆಗದೇ ಇರುವುದನ್ನು ಪರಿಶೀಲಿಸಿದರು.

ಈ ರೀತಿ ಘಟಕಗಳನ್ನು ನಿರ್ಮಿಸುವುದರಿಂದ ಕೇಂದ್ರ ಸರ್ಕಾರದ ಕಾರ್ಯಕ್ರಮವಾದ NNBOMP ಕಾರ್ಯಕ್ರಮದ ಸಮರ್ಪಕ ಅನುಷ್ಠಾನಕ್ಕೆ ಸಾರ್ವಜನಿಕರಿಂದ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

ಈ ಕುರಿತು ಬೆಂಗಳೂರು(ಗ್ರಾ), ಹಾವೇರಿ ಮತ್ತು ರಾಮನಗರ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರಿಗೆ Flexi Model ಅನುಷ್ಠಾನದಲ್ಲಿನ Advantages & Disadvantage ಕುರಿತಂತೆ ವರದಿ ನೀಡುವಂತೆ ಹಾಗೂ ಈ ವರದಿಯನ್ವಯ ಅಂಶಗಳ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಾಗೂ ಆಯುಕ್ತರು, ಕೃಷಿ ಇಲಾಖೆರವರ ಗಮನಕ್ಕೆ ತರುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

(ಕ್ರಮ: ನಿರ್ದೇಶಕರು, ಗ್ರಾಮೂಸೌ-2. ಗ್ರಾಅಪ ಇಲಾಖೆ )

7. ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮದಡಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ / ಉಪಕಾರ್ಯದರ್ಶಿ(ಅಭಿವೃದ್ಧಿ) / ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ರವರಿಂದ ಅನುಮೋದಿತಗೊಂಡ ಪ್ರಗತಿ ವರದಿಗಳನ್ನು ಮಾತ್ರ ಪರಿಗಣಿಸಲಾಗುವುದು ಎಂದು ತೀರ್ಮಾನಿಸಲಾಯಿತು.

ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಹೆಚ್ಚಿನ ಗುರಿಯ ಬೇಡಿಕೆ ಮತ್ತು ಗುರಿ ಮತ್ತು ಅನುದಾನ ಹಿಂಪಡೆಯಬಹುದಾದ ಕುರಿತಂತೆ ಪ್ರಸ್ತಾವನೆಯನ್ನು ನಿಗದಿತ ಸಮಯದಲ್ಲಿ ಜಿಲ್ಲಾ ಪಂಚಾಯತ್‌ಗಳಿಂದ ಸಲ್ಲಿಸಲು ತೀರ್ಮಾನಿಸಲಾಯಿತು.

(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

8. 2020-21 ರಿಂದ 2022-23ನೇ ಸಾಲಿನವರೆಗೆ ಕಾರ್ಯಕ್ರಮದಡಿ ಫಲಾನುಭವಿಗಳ ಆಯ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯಲ್ಲಿ ಕೃಷಿ, ತೋಟಗಾರಿಕೆ ಮತ್ತು ಪಶು ಸಂಗೋಪನೆ ಇಲಾಖಾ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಾರ್ಯಕ್ರಮದಡಿ ಮುಂಬರುವ ಮೂರು ವರ್ಷಗಳಿಗೆ ಅನ್ವಯವಾಗುವಂತೆ ವರ್ಷಾವಾರು, ಸಾಮಾನ್ಯವರ್ಗ, SC&ST ವರ್ಗದಡಿ ಕೆಳಕಂಡ ವಿವರಗಳನ್ನೊಳಗೊಂಡ ಫಲಾನುಭವಿಗಳನ್ನು ಆಯ್ಕೆ ಮಾಡುವ ಕುರಿತಂತೆ Demand Survey (ಬೇಡಿಕೆ ಸಮೀಕ್ಷೆ) ಯನ್ನು ಕೈಗೊಂಡು **ಮೇ 2020ರೊಳಗೆ** ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತೀರ್ಮಾನಿಸಲಾಯಿತು.

ಜಿಲ್ಲೆ :                                                    ತಾಲ್ಲೂಕು:

ಇಲಾಖೆ :                                                    ಗ್ರಾಮ ಪಂಚಾಯತ್ :

| ಕ್ರ.ಸಂ | ಗ್ರಾಮ | ಆಸಕ್ತಿಯುಳ್ಳ ಫಲಾನು ಭವಿಗಳ ಹೆಸರು ಮತ್ತು ಆಧಾರ ಸಂಖ್ಯೆ | ವರ್ಗ | | | ಸ್ವಂತ ನಿವೇಶನ ಅಳತೆ | ಫಲಾನುಭವಿ ಹೊಂದಿದ ಜಾನು ವಾರುಗಳ ಸಂಖ್ಯೆ | ನಿರ್ಮಿಸಿಕೊಳ್ಳಬಹುದಾದ ಘಟಕಗಳ ಸಾಮರ್ಥ್ಯ | ಷರಾ |
|---|---|---|---|---|---|---|---|---|---|
| | | | ಸಾಮಾನ್ಯ | SC | ST | | | | |
| 1 | | | | | | | | | |

ನಿಗದಿತ ಅವಧಿಯಲ್ಲಿ ನಿಗದಿತ ನಮೂನೆಯಲ್ಲಿ ಬೇಡಿಕೆ ಸಮೀಕ್ಷೆಯನ್ನು ಸಲ್ಲಿಸುವ ಪೂರ್ವದಲ್ಲಿ ಇಲಾಖಾವಾರು ಫಲಾನುಭವಿಗಳ ವಿವರಗಳು ಪುನರಾವರ್ತನೆಯಾಗದಂತೆ ಯೋಜನಾ ಅಭಿಯಂತರರು (ಸಗ್ರಾಇಂಕಾ) ರವರು ಪರಿಶೀಲನೆ ಮಾಡಿ ಜಿಲ್ಲಾ ಗ್ರಾಮೀಣ ಇಂಧನ ಕೋಶ ಸಮಿತಿಗೆ ಅನುಮೋದನೆಗಾಗಿ ಸಲ್ಲಿಸುವುದು ಸಮಿತಿ ಅನುಮೋದನೆ ತರುವಾಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ Demand Survey ವರದಿಯನ್ನು ಸಲ್ಲಿಸುವುದು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

12/3/20.

(ಕೆ. ರೇವಣಪ್ಪ)
ನಿರ್ದೇಶಕರು(ಗ್ರಾಮೂಸೌ-2)
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕಡತ ಸಂಖ್ಯೆ:ಗ್ರಾಅಪ/29/ಜೈಅಯೋ/2019 ಬೆಂಗಳೂರು, ದಿನಾಂಕ.07.03.2020.

ಗೆ:

1. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಉಪಕಾರ್ಯದರ್ಶಿ(ಅಭಿವೃದ್ಧಿ)/ಯೋಜನಾ ನಿರ್ದೇಶಕರು.
3. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು(ಸಗ್ರಾಇಂಕಾ).

ಪ್ರತಿಯನ್ನು,

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಅಪ ಇಲಾಖೆ.
2. ಇಲಾಖಾ ಗಣಕಜಾಲ, ಗ್ರಾಅಪ ಇಲಾಖೆ.
3. ರಕ್ಷ ಕಡತ / ಹೆಚ್ಚುವರಿ ಪ್ರತಿ.

## ದಿನಾಂಕ 06.03.2020 ರಂದು ನಡೆದ ಗ್ರಾಇಂಕಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಾಜರಾದವರ ಪಟ್ಟಿ.

1. ಶ್ರೀ ಕೆ. ರೇವಣಪ್ಪ, ನಿರ್ದೇಶಕರು (ಗ್ರಾಮೂಸೌ-2) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಶ್ರೀ ಕೃಷ್ಣಪ್ಪ ಲೋಹರ್, ಉಪ ನಿರ್ದೇಶಕರು(ಗ್ರಾಮೂಸೌ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಶ್ರೀಮತಿ ಭಾಗ್ಯಶ್ರೀ ಹೆಚ್. ಎಸ್. ಉಪ ನಿರ್ದೇಶಕರು(ಗ್ರಾಮೂಸೌ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಶ್ರೀಮತಿ ನೇತ್ರಾವತಿ, ಅಧೀಕ್ಷಕರು, ಗ್ರಾಮೂಸೌ-2, ಗ್ರಾಅಪಂ. ರಾಜ್ ಇಲಾಖೆ.
5. ಶ್ರೀ ಮಾರ್ಕಂಡಯ್ಯ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್ ಬಾಗಲಕೋಟೆ & ವಿಜಯಪುರ.
6. ಶ್ರೀ ಎಂ. ಎಸ್. ಸುದರ್ಶನ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಂಗಳೂರು(ಗ್ರಾ), ಚಿಕ್ಕಬಳ್ಳಾಪುರ ಮತ್ತು ಕೋಲಾರ.
7. ಶ್ರೀ ಶಿವಣ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಂಗಳೂರು(ನ).
8. ಶ್ರೀ ಜಿ. ಎಲ್. ಬದಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು.
9. ಶ್ರೀ ಬಸವರಾಜ್ ಯಲಬುರಗಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಮಂಡ್ಯ & ಚಾಮರಾಜನಗರ.
10. ಶ್ರೀ ಶೇಕ್ ಅಹಮ್ಮದ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಚಿತ್ರದುರ್ಗ.
11. ಶ್ರೀ ಬಸವರಾಜಪ್ಪ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ದಾವಣಗೆರೆ ಮತ್ತು ಶಿವಮೊಗ್ಗ.
12. ಶ್ರೀ ದತ್ತಾತ್ರಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾಸನ, ಚಿಕ್ಕಮಗಳೂರು, ಉಡುಪಿ ಮತ್ತು ದಕ್ಷಿಣ ಕನ್ನಡ.
13. ಶ್ರೀ ಉತ್ತಮ ಕುಮಾರ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾವೇರಿ & ಗದಗ.
14. ಶ್ರೀ ಶ್ರೀನಿವಾಸ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ತುಮಕೂರು.
15. ಶ್ರೀ ಎಸ್. ಮುರ್ತುಜಾ ಆಲಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಮೈಸೂರು.
16. ಶ್ರೀ ನಂಜುಂಡೇ ಗೌಡ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ರಾಮನಗರ.
17. ಶ್ರೀ ಎಸ್. ಪಿ. ಪಾಟೀಲ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೀದರ್, ಕಲಬುರಗಿ ಮತ್ತು ಯಾದಗಿರಿ.
18. ಶ್ರೀ ಕೃಷ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಉತ್ತರ ಕನ್ನಡ.
19. ಶ್ರೀ ಶಿವಾನಂದ ಕಮತಗಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಳಗಾವಿ.

–0–